**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 246/2017 ಸಿಡಬ್ಲ್ಯೂ ಃ 7**

**ಪಿಡಬ್ಲ್ಯೂ ಃ 4**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | **ಪುಂಡಪ್ಪ** |
| **ತಂದೆಯ ಹೆಸರು** | ಃ | **ನರಸಿಂಗಪ್ಪ ಜಾದವ** |
| **ವಯಸ್ಸು** | ಃ | **58 ವರ್ಷ** |
| **ಉದ್ಯೋಗ** | ಃ | **ಪಿ ಎಸ್ ಐ** |
| **ವಾಸ** | ಃ | **ಕುಷ್ಟಗಿ** |

**ದಿನಾಂಕಃ 23.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

1. ನಾನು 2016 ರಿಂದ 2018 ರವರೆಗೆ ಎ ಎಸ್ ಐ ಆಗಿ ಕುಷ್ಟಗಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ10.02.2017 ರಂದು ಬೆಳಿಗ್ಗೆ 06.00 ಗಂಟೆಗೆ ಚಾಸಾ 1 ರವರು ಹಾಜರುಪಡಿಸಿದ ವರದಿಯ ಸಾರಾಂಶದ ಮೇರೆಗೆ ಠಾಣಾ ಗುನ್ನಾ ನಂ. 34/2017 ರಲ್ಲಿ ಕಲಂ 96(ಬಿ) ಕೆಪಿ ಆ್ಯಕ್ಟ್ ಅಡಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವ. ಯನ್ನು ಪಿಸಿ 337 ರವರ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಅದೇ ದಿನ ಜಪ್ತಿ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ 08.00 ರಿಂದ 09.00 ಗಂಟೆಯವರೆಗೆ ಪೊಲೀಸ್ ಠಾಣೆಯ ಆವರಣದಲ್ಲಿ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ 2 ಅಡಿ ಉದ್ದದ ರಾಡು ಮತ್ತು ಕಾರದ ಪುಡಿಯನ್ನು ಜಪ್ತಿ ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸಾ 2 ಮತ್ತು 3 ರವರ ಸಮಕ್ಷಮ 09.30 ರಿಂದ 10.30 ಗಂಟೆಯವರೆಗೆ ಗುನ್ನೆ ಜಾಗೆಯ ಪಂಚನಾಮೆ ಮಾಡಿರುತ್ತೇನೆ. ಅದೇ ದಿನ ಪಿಸಿ 116, 161 ಮತ್ತು 109 ರವರ ಸಂಗಡ ಮಾನ್ಯ ನ್ಯಾಯಾಲಯಕ್ಕೆ ಜೆಸಿ ಕುರಿತು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ 4, ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ.

3. ದಿನಾಂಕ 11.02.2017 ರಂದು ಆರೋಪಿತರ ಮೇಲೆ ಆರೋಪ ಸಾಬೀತಾದ ಮೇಲೆ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ನಾನು ಮು.ಮಾ. ಮತ್ತು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

4. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 3ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 4 ಎಂದು, ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 1ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 2ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ. 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ಮತ್ತು 2 ನೇ ಆರೋಪಿತರು ಹಾಗೂ ವಿಸಿ ಮುಖಾಂತರ ಹಾಜರಿರುವ 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಬಿ ಡಿ ಎ ವಕೀಲರಿಂದಃ**

5. ದಿನಾಂಕ 09.02.2017 ರಂದು ಠಾಣಾ ಎಸ್ ಹೆಚ್ ಓ ಆಗಿ ಹೆಚ್ ಸಿ 116 ಅವರು ಇದ್ದರು. ಗಸ್ತು ತಿರುಗುವಾಗ ಯಾರು ಗಸ್ತಿಗೆ ಹೋಗುತ್ತಾರೆ ಎಂದು ದಿನಚರಿಯಲ್ಲಿ ನಮೂದಿಸುತ್ತಾರೆ ಹಾಗೂ ಯಾರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಗಸ್ತು ಹೋಗಿರುತ್ತಾರೆ ಎಂದು ನಮೂದಿಸುತ್ತಾರೆ ಎಂದರೆ ಸರಿ. ಆ ದಿನ ಯಾರು ಯಾರು ಗಸ್ತಿಗೆ ಹೋಗಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ.

6. ಚಾಸಾ 4 ಮತ್ತು 5 ರವರು ದಿನಾಂಕ 09.02.2017 ರಂದು ರಾತ್ರಿ ಗಸ್ತಿಗೆ ಹಾಕಿದ್ದರು. ರಾತ್ರಿ 10.30 ಗಂಟೆಗೆ ಅವರನ್ನು ಹಾಕಿದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರಾದರೂ ಹೋಗಿದ್ದರಾ ಅದು ಬೀಟ್ ಆಧಾರದ ಮೇಲೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಬೀಟ್‌ನವರು ಗಸ್ತಿಗೆ ಹೋಗಲು ಆ ಬಗ್ಗೆ ರಿಪೋರ್ಟ ಮಾಡಿಕೊಂಡು ಹೋಗುತ್ತಾರೆ ಎಂದರೆ ಸರಿ. ಆ ದಿನ ಯಾರು ಯಾರು ವರದಿ ಮಾಡಿಕೊಂಡು ಎಷ್ಟು ಗಂಟೆಗೆ ಗಸ್ತಿಗೆ ಹೋಗಿರುತ್ತಾರೆ ಎಂದು ಹೇಳಲು ಆಗುವುದಿಲ್ಲ.

7. ನಾನು ಆ ದಿನ ಠಾಣೆಗೆ ಬೆಳಿಗ್ಗೆ 06.00 ಗಂಟೆಗೆ ಬಂದಿರುತ್ತೇನೆ. ನಾನು ಠಾಣೆಗೆ ಬಂದಾಗ ಎಸ್ ಹೆಚ್ ಒ ಆಗಿ ಬಸವರಾಜ ಮುಖ್ಯಪೇದೆ ಇದ್ದರು. ನಾನು ಠಾಣೆಗೆ ಬಂದಾಗ ಠಾಣೆಯಲ್ಲಿ ಇಬ್ಬರೂ ಇದ್ದರು. ಅವರ ಹೆಸರು ಶರಣಪ್ಪ ಮತ್ತು ರವಿ. ಠಾಣೆಗೆ ಚಾಸಾ 1 ರವರು ಬಂದಾಗ ಬೆಳಿಗ್ಗೆ 05.00 ಗಂಟೆ ಆಗಿತ್ತು. ಅವರು 05.00 ಗಂಟೆಯಿಂದ 06.00 ಗಂಟೆಯವರೆಗೆ ಠಾಣೆಯಲ್ಲಿಯೇ ಇದ್ದರು, ನಾನು ಬಂದ ನಂತರ ಅವರು ಹೋಗಿರುತ್ತಾರೆ. ದೂರನ್ನು ಹೆಚ್ ಸಿ 117 ಅವರು ಟೈಪ್ ಮಾಡಿರುತ್ತಾರೆ. ಅವಚರು ಟೈಪ್ ಮಾಡಿದ ಕುರಿತು ದಸ್ತುರು ಸಹಿ ಮಾಡಿಲ್ಲ. ದೂರನ್ನು ಬೆಳಿಗ್ಗೆ 06.00 ರಿಂದ 07.00 ಗಂಟೆಯವರೆಗೆ ಟೈಪ್ ಮಾಡಿರುತ್ತಾರೆ.

8. ಠಾಣೆಯ ಆವರಣದಲ್ಲಿ ಉತ್ತರ ದಿಕ್ಕಿನಲ್ಲಿ ಜಪ್ತಿ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಇಬ್ಬರೂ ಪಂಚರು, ರೈಟರ್ ಮತ್ತು ನಾನು ಇದ್ದೆ. ಪಂಚರನ್ನು ಹೆಚ್ ಸಿ 117 ಅವರು ಕರೆದುಕೊಂಡು ಬಂದಿರುತ್ತಾರೆ.

9. ಮು.ಮಾ. 1 ರಂತಹ ರಾಡ್ ಕಬ್ಬಿಣದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ. 1 ಅನ್ನು 1 ನೇ ಆರೋಪಿಯಿಂದ ವಶಪಡಿಸಿಕೊಂಡಿದೆ. ಮು.ಮಾ. 1 ನ್ನು ಗಜೇಂದ್ರಗಡ ಸರ್ಕಲ್ ಹತ್ತಿರ ವಶಪಡಿಸಿಕೊಂಡಿದೆ. 1 ನೇ ಆರೋಪಿಯಿಂದ ಮು.ಮಾ. 1 ನ್ನು ಗಜೇಂದ್ರಗಡ ಸರ್ಕಲ್ ಹತ್ತಿರ ವಶಪಡಿಸಿಕೊಂಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಆರೋಪಿತರನ್ನು ಬೆಳಿಗ್ಗೆ 05.00 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. 05.00 ರಿಂದ 10.30 ಗಂಟೆಯವರೆಗೆ ಆರೋಪಿತರು ಠಾಣೆಯಲ್ಲಿ ಇದ್ದರು. 10.30 ಗಂಟೆ ಆದ ನಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಆರೋಪಿತರನ್ನು ಸ್ಥಳಕ್ಕೆ 09.30 ಗಂಟೆಗೆ ಕರೆದುಕೊಂಡು ಹೋಗಿ 10.30 ಗಂಟೆಯವರೆಗೆ ಇದ್ದೆ. ಘಟನಾ ಸ್ಥಳಕ್ಕೆ ಹೋದಾಗ ಸಾಕಷ್ಟು ಜನರು ಇದ್ದರು. ಬ್ಯಾಂಕ್ ಸಿಬ್ಬಂದಿಗಳನ್ನು ನಾನು ವಿಚಾರಣೆ ಮಾಡಿಲ್ಲ. ಸಾರ್ವಜನಿಕರನ್ನು ವಿಚಾರಣೆ ಮಾಡಿಲ್ಲ. ಠಾಣೆಗೆ ಆರೋಪಿತರನ್ನು ಕರೆದುಕೊಂಡು ಬಂದಾಗ 11.00 ಗಂಟೆ ಆಗಿತ್ತು. 11.00 ರಿಂದ 12.00 ರವರಗೆ ಅವರು ಇದ್ದರು, ಪೊಸಿಜರ್ ಮುಗಿಸಿ ಜೆಸಿ ಕಳುಹಿಸಿರುತ್ತೇನೆ.

11. ಮೊ.ಸೈ. 1 ನೇ ಆರೋಪಿಗೆ ಸಂಬಂಧಿಸಿದ್ದು. ಅದು 1 ನೇ ಆರೋಪಿಗೆ ಸಂಬಂಧಿಸಿದ್ದು ಎಂದು ತೋರಿಸಲು ದಾಖಲೆ ಪಡೆದುಕೊಂಡಿಲ್ಲ. ತನಿಖಾ ಕಾಲದಲ್ಲಿ ಅದು 1

ನೇ ಆರೋಪಿಗೆ ಸಂಬಂಧಿಸಿದ್ದು ಎಂದು ಕಂಡುಬಂದಿರುತ್ತದೆ. ಆ ಕುರಿತು ಚಾರ್ಜ್ ಶೀಟ್ ಜೊತೆಗೆ ದಾಖಲೆ ಹಾಜರುಪಡಿಸಿಲ್ಲ.

12. ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಚಾಸಾ 4 ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ 2 ಮತ್ತು 3 ರವರ ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ನಾನು ನಿಪಿ 1 ಮತ್ತು 2 ರಂತೆ ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ 1 ನೇ ಆರೋಪಿಯಿಂದ ಮು.ಮಾ.ಗಳನ್ನು ವಶಪಡಿಸಿಕೊಂಡ ಬಗ್ಗೆ ಬರೆದಿದ್ದಿರಾ ಎಂದರೆ ಇಲ್ಲ. ನಾನು ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಮು.ಮಾ. 1 ಮತ್ತು 2 ಅನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ. 1 ಮತ್ತು 2 ಕ್ಕೂ, ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಸಿ ಪಿ ಪಿ ವಕೀಲರಿಂದಃ**

13. ಚಾಸಾ 1 ರವರಿಂದ ವರದಿ, ರಾಡು, ಕಾರದ ಪುಡಿ ಪಡೆದಿರುತ್ತೇನೆ. ಕಾರದ ಪುಡಿ ಚಾಸಾ 1 ರವರಿಂದ ಪಡೆದಾಗ ಹಾಳೆಯಲ್ಲಿ ಇತ್ತು. ಕಾರದ ಪುಡಿ ಎಷ್ಟು ಗ್ರಾಂ ಇತ್ತು ಎಂದು ತೂಕ ಮಾಡಿಲ್ಲ. ಗಜೇಂದ್ರಗಡ ರಸ್ತೆಗೆ ಪಿ ಎಸ್ ಐ ಮತ್ತು ಇಬ್ಬರೂ ಬೀಟ್ ಪೊಲೀಸರು ಆ ದಿನ ಗಸ್ತಿಗೆ ಇದ್ದರು. ಎಸ್ ಬಿ ಎಮ್ ಬ್ಯಾಂಕಗೆ ಸಿಸಿ ಕ್ಯಾಮೆರಾ ಇತ್ತು ಎಂದರೆ ಸರಿ. ಹೊರಗಡೆ ಸಹ ಕ್ಯಾಮೆರಾ ಇತ್ತು ಎಂದರೆ ಸರಿ. ಆ ಸಂಬಂಧ ಸಿಸಿ ಕ್ಯಾಮೆರಾ ಫೂಟೇಜಗಳನ್ನು ಪಡೆದಿಲ್ಲ. ಎಸ್ ಬಿ ಎಮ್ ಬ್ಯಾಂಕ್ ಯಾವ ಮತ್ತು ಯಾರ ಮಾಲೀಕತ್ವದ ಕಟ್ಟದಲ್ಲಿ ಇತ್ತು ಎಂದು ವಿಚಾರಣೆ ಮಾಡಿಲ್ಲ. ಬ್ಯಾಂಕ್ ಅಪ್‌ಸ್ಟೇರ್ ನಲ್ಲಿ ಇತ್ತು. ನನ್ನ ತನಿಖಾ ಕಾಲದಲ್ಲಿ ಬ್ಯಾಂಕಗೆ ಹೋಗಿ ಮ್ಯಾನೇಜರ ಅವರಿಂದ ಯಾವುದೇ ಸಿಸಿ ಕ್ಯಾಮೆರಾ ಫೂಟೇಜ್ ಪಡೆದಿಲ್ಲ.

14. ಬ್ಯಾಂಕಗೆ ಸೆಕ್ಯೂರಿಟಿ ಗಾರ್ಡ ಇದ್ದ ಬಗ್ಗೆ ವಿಚಾರ ಮಾಡಿಲ್ಲ. ಜಪ್ತಿ ಪಂಚನಾಮೆಯಲ್ಲಿ ಚೆಕ್ಕಬಂದಿ ತೋರಿಸಿಲ್ಲ ಎಂದರೆ ಸರಿ. ಜಪ್ತಿ ಪಂಚನಾಮೆಯನ್ನು

ಹೆಚ್ ಸಿ 117 ಅವರು ಬರೆದಿರುತ್ತಾರೆ ಆದರೆ ದಸ್ತುರು ಸಹಿ ಮಾಡಿಲ್ಲ. ಠಾಣೆಯ ಉತ್ತರ ದಿಕ್ಕಿಗೆ ಜಪ್ತಿ ಪಂಚನಾಮೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಗಾಗಿ ಜಪ್ತಿ ಪಂಚನಾಮೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

15. ಸ್ಥಳ ಪಂಚನಾಮೆಯನ್ನು ಹೆಚ್ ಸಿ 117 ಅವರು ಬರೆದಿರುತ್ತಾರೆ ಆದರೆ ದಸ್ತುರು ಸಹಿ ಮಾಡಿಲ್ಲ. ಬ್ಯಾಂಕ್ ನೆಲಮಹಡಿಯಲ್ಲಿ ಇದೆಯೋ ಅಥವಾ ಮೇಲ್ಮಅಡಿಯಲ್ಲಿ ಇದೆಯೋ ಎಂದು ತೋರಿಸಿಲ್ಲ ಎಂದರೆ ಸರಿ. ಚಾಸಾ 2 ಮತ್ತು 3 ನಮ್ಮ ಠಾಣೆಯಲ್ಲಿ ನಾವು ಹೇಳಿದ ಕೆಲಸ ಮಾಡುತ್ತಾ ಇದ್ದ ವ್ಯಕ್ತಿಗಳು ಎಂದರೆ ಸರಿಯಲ್ಲ. ಮು.ಮಾ.1 ರಾಡಿನ ಎರಡು ಬದಿ ಚೂಪಾಗಿಲ್ಲ, ಮೊಂಡಾಗಿದೆ ಎಂದರೆ ಸರಿ. ಕಳವು ಮಾಡಲು ಚೂಪಾದ ವಸ್ತುಗಳನ್ನು ಬಳಸುತ್ತಾರೆ ಎಂದರೆ ಸರಿಯಲ್ಲ.ಸಾರ್ವಜನಿಕ ಸ್ಥಳದಲ್ಲಿ ಅಂತಹ ಕಬ್ಬಿಣದ ರಾಡು ಸಿಗುತ್ತವೆ ಎಂದರೆ ಸರಿ. ಕಾರದ ಪುಡಿ ಅಂಗಡಿಯಲ್ಲಿ ಮತ್ತು ಸಾರ್ವಜನಿಕ ಸ್ಥಳದಲ್ಲಿ ಸಿಗುತ್ತವೆ ಎಂದರೆ ಸರಿ. ಮು,ಮಾ. 1 ಮತ್ತು 2 ನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದಾರೆ ಎಂದು ಚಾಸಾ 1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ನನ್ನ ಮೇಲಾಧಿಕಾರಿ ಇದ್ದು, ಅವರು ಹೇಳಿದಂತೆ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಕೆ.ಪಿ.ಆ್ಯಕ್ಟ್ ಕೆಳಗಡೆ ಇಂತಿಷ್ಟು ಪ್ರಕರಣ ದಾಖಲಿಸಬೇಕು ಎಂದು ಮೇಲಾಧಿಕಾರಿಗಳಿಂದ ಆದೇಶ ಇರುತ್ತದೆ ಎಂದರೆ ಸರಿಯಲ್ಲ. ಆದೇಶ ಪಾಲನೆಗಾಗಿ ಅಂಕಿ ಸಂಖ್ಯೆಗಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಂದ ಮು.ಮಾ. 1 ಮತ್ತು 2 ಅನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ. 1 ಮತ್ತು 2 ಕ್ಕೂ, ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಸಮಕ್ಷಮ ಪಂಚನಾಮೆ ಮಾಡಿರುತ್ತದೆ ಎಂದು ನಿಪಿ 3 ರಂತೆ ಹೇಳಿದ್ದು ಆ ರೀತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀಸವಾಲನ್ನು ತನ್ನ ಪರವಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ